## 3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು

***SC.No.69/2021***

PW.1
CW.1

ದಿನಾಂಕಃ 23-05-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

| | |
|---|---|
| ಹೆಸರುಃ | ನವೀನ ಹೆಚ್.ಎಸ್ |
| ತಂದೆಯ ಹೆಸರುಃ | ಸಂಜೀವಯ್ಯ |
| ವಯಸ್ಸುಃ | 38 ವರ್ಷ |
| ವೃತ್ತಿಃ | ಪಿಐ.ಡಿಸಿಅರ್.ಜಿ ಚಿಕ್ಕಬಳ್ಳಾಪುರ |
| ವಾಸಸ್ಥಳಃ | ಚಿಕ್ಕಬಳ್ಳಾಪುರ |

**ಮುಖ್ಯ ವಿಚಾರಣೆಃ ಸರ್ಕಾರಿ** ಅಭಿಯೋಜಕ**ರಿಂದ**

ದಿನಾಂಕಃ 2-10-2019 ರಿಂದ 5-8-2021 ರವರೆಗೆ ನಾನು ತಿಲಕ್ ಪಾರ್ಕ್ ಠಾಣೆಯಲ್ಲಿ ಪಿಎಸ್ಐ ಅಗಿ ಕಾರ್ಯನಿರ್ವಹಿಸಿದ್ದೆ.

2. ದಿನಾಂಕಃ 6-12-2020 ರಂದು ತಿಲಕ್ ಪಾರ್ಕ್ ಠಾಣೆಯ ಪಿಐ ಚಾಸಾಃ 17 ರವರು ಎನ್.ಇ.ಪಿ.ಎಸ್ ಠಾಣಾ ಮೊಕದ್ದಮೆ ಸಂಖ್ಯೆ 91/2020 ರಲ್ಲಿ ಕಲಂ 302 ಐಪಿಸಿ ಪ್ರಕರಣದಲ್ಲಿ ಮತ್ತು ಠಾಣಾ ಮೊಕದ್ದಮೆ ಸಂಖ್ಯೆ39/2020 ರಲ್ಲಿ ಕಲಂ 399 ಮತ್ತು 402 ಐಪಿಸಿ ಪ್ರಕರಣದಲ್ಲಿ ತಲೆ ಮರೆಸಿಕೊಂಡಿದ್ದ ಶಂಕಿತ ಆರೋಪಿಯಾದ ವಿಕಿ ಅಲಿಯಾಸ್ ವಿಕಾಸ್ ರವರ ಪತ್ತೆಗಾಗಿ ತಂಡ ರಚಿಸಿದ್ದು, ಅದರಲ್ಲಿ ಚಾಸಾಃ 2, 3, 4 ರವರೂ ಸಹ ಇದ್ದರು. ಚಸಾಃ 17 ನನಗೆ ಒಂದು ಮೆಮೋ ಜಾರಿಮಾಡಿದ್ದರು. ಸದರಿ ಮೆಮೋ ಅನ್ವಯ ನಾನು ನಮ್ಮ ತಂಡದ

ಸದಸ್ಯರೊಂದಿಗೆ ಅರೋಪಿ ಪತ್ತೆಗಾಗಿ ನೇಮಕಗೊಂಡಿದ್ದೆ. ದಿನಾಂಕಃ 6-12-2020 ರಂದು ಬೆಳಿಗ್ಗೆ 5 ಗಂಟೆಗೆ ಬಾತ್ಮಿದಾರರ ಮಾಹಿತಿ ಮೇರೆಗೆ ನನ್ನ ತಂಡದ ಸಿಬ್ಬಂದಿಗಳೊಂದಿಗೆ ತುಮಕೂರು ಗ್ರಾಮಾಂತರ ಠಾಣಾ ವ್ಯಾಪ್ತಿಯ ಅಜ್ಜಪ್ಪನಹಳ್ಳಿ ಗ್ರಾಮದ ಅಂಜನೇಯ ಸ್ವಾಮಿ ದೇವಸ್ಥಾನದ ಬಳಿ ಇರುವ ಸಮುದಾಯ ಭವನದಲ್ಲಿ ಶಂಕಿತ ಅರೋಪಿ ಅಡಗಿರುವ ಮಾಹಿತಿ ಬಂತು. ನಾನು ಮತ್ತು ತಂಡದವರು ಬೆಳಿಗ್ಗೆ 5-20 ಕ್ಕೆ ಸಮುದಾಯಬವನದ ಬಳಿ ಹೋಗಿ ನೋಡಿದಾಗ ಸದರಿ ಭವನ ನಿರ್ಮಾಣ ಹಂತದಲ್ಲಿತ್ತು. ಸದರಿ ಭವನಕ್ಕೆ ಕಿಟಕಿ ಬಾಗಿಲುಗಳನ್ನು ಅಳವಡಿಸಿರಲಿಲ್ಲ. ನಾವು ಸಮುದಾಯಭವನದ ಬಳಿ ಹೋದಾಗ ಶಂಕಿತ ಅರೋಪಿ ಸಮುದಾಯಭವನದ ಒಳಬಾಗದಿಂದ ಹೊರಗೆ ಬಂದಿದ್ದ. ಸಮವಸ್ತ್ರದಲ್ಲಿದ್ದ ನಮ್ಮ ತಂಡವನ್ನು ನೋಡಿ ಶಂಕಿತ ಆರೋಪಿ ಓಡಲು ಪ್ರಾರಂಭ ಮಾಡಿದ.

3. ನಮ್ಮ ತಂಡದಲ್ಲಿದ್ದ ಚಾಸಾಃ 2 ಶಂಕಿತ ಆರೋಪಿಯ ಬೆನ್ನತ್ತಿದರು. ಕೂಡಲೇ ಶಂಕಿತ ಆರೋಪಿ ಡ್ರಾಗರ್ ನಿಂದ ಚಾಸಾಃ 2 ರವರ ಎಡಗೈ ರೆಟ್ಟೆಗೆ ಹಲ್ಲೆ ಮಾಡಿದರು. ನಂತರ ನಾನು ಶಂಕಿತ ಆರೋಪಿಯನ್ನು ಹಿಡಿಯಲು ಹೋಗಿದ್ದೆ. ಅದೇ ಡ್ರಾಗರ್ ನಿಂದ ಆರೋಪಿ ನನಗೆ ಹಲ್ಲೆ ಮಾಡಲು ಪ್ರಯತ್ನಿಸಿದ ನಾನು ಅರೋಪಿಯಹಲ್ಲೆಯಿಂದ ತಪ್ಪಿಸಿಕೊಂಡಿದ್ದೆ. ನನ್ನ ಜೊತೆ ನನ್ನ ಪಕ್ಕದಲ್ಲಿದ್ದ ಚಾಸಾಃ 3 ರವರನ್ನು ಹಲ್ಲೆ ಮಾಡಲು ಪ್ರಯತ್ನಿಸಿದ. ನಾನು ಕೂಡಲೇ ಅರೋಪಿಗೆ ಶರಣಾಗುವಂತೆ ಒಂದು ಬಾರಿ ಎಚ್ಚರಿಕೆ ನೀಡಿದೆ. ಆರೋಪಿತ ಶರಣಾಗಲಿಲ್ಲ. ಕೂಡಲೇ ನಾನು ನನ್ನ ಸರ್ವೀಸ್ ಪಿಸ್ತೂಲ್ ನಿಂದ ಒಂದು ಸುತ್ತು ಗಾಳಿಯಲ್ಲಿ ಗುಂಡು ಹಾರಿಸಿ ಮತ್ತೆ ಶರಣಾಗುವಂತೆ ಎಚ್ಚರಿಕೆ ನೀಡಿದೆ. ಆದರೆ ಆರೋಪಿ ಶರಣಾಗದೇ ಮತ್ತೆ ಹಲ್ಲೆ ಮಾಡಲು ಪ್ರಯತ್ನಿಸಿದರು.

4. ನಾನು ಕೂಡಲೇ ನನ್ನ ಹಾಗೂ ನನ್ನ ಸಿಬ್ಬಂದಿಯ ಆತ್ಮರಕ್ಷಣೆಗಾಗಿ ಅರೋಪಿಯ ಕಾಲಿಗೆ ಗುಂಡು ಹಾರಿಸಿದೆ. ಅರೋಪಿತ ಸ್ಥಳದಲ್ಲಿ ಕುಸಿದು ಬಿದ್ದಿದ್ದರು. ನಾನು ಮತ್ತು ನನ್ನ

ತಂಡದ ಸಿಬ್ಬಂದಿ ಹತ್ತಿರ ಹೋಗಿ ನೋಡಿದಾಗ ಅತನ ಎಡಕಾಲಿನ ಮಂಡಿಯಬಳಿ ಗುಂಡು ತಗುಲಿ ರಕ್ತಗಾಯವಾಗಿ ರಕ್ತಸ್ರಾವವಾಗುತ್ತಿತ್ತು. ನಾನು ಪಿಸ್ತೂಲ್ ನಿಂದ ಫೈರ್ ಮಾಡಿದ ಅರೋಪಿಗೆ ಗುಂಡು ಹಾರಿಸಿದ ಕೂಡಲೇ ಸದರಿ ವಿಚಾರನ್ನು ಚಾಸಾಃ 17 ರವರಿಗೆ ಪೋನ್ ಅಥವಾ ವೈರ್ ಲೆಸ್ ಮೂಲಕ ತಿಳಿಸಿದ್ದೆ. ನಂತರ ನಾನು ನನ್ನ ಸಿಬ್ಬಂದಿಗಳ ಸಹಾಯದಿಂದ ಗಾಯಗೊಂಡಿದ್ದ ಚಾಸಾಃ 2 ರವರನ್ನು ಮತ್ತು ಗಾಯಾಳು ಅರೋಪಿಯನ್ನೂ ಸಹ ನಮ್ಮ ಜೀಪಿನ ಮಧ್ಯದ ಸೀಟಸಿನಲ್ಲಿ ಕೂರಿಸಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋಗಿದ್ದೆ. ಗಾಯಾಳುಗಳ ಪಕ್ಕದಲ್ಲಿ ಚಾಸಾಃ 3 ಮತ್ತು 4 ರವರನ್ನು ಎರಡೂ ಬದಿಗಳಲ್ಲಿ ಕೂರಿಸಿದ್ದೆ. ಗಾಯಾಳುಗಳನ್ನು ನಮ್ಮ ಜೀಪಿನಲ್ಲಿ ಆಸ್ಪತ್ರೆಗೆ ಕರೆತರುತ್ತಿದ್ದಾಗ ಚಾಸಾಃ 17 ರವರು ನಮ್ಮ ಎದುರುಬಾಗದಿಂದ ತಮ್ಮ ಜೀಪಿನಲ್ಲಿ ಬಂದಿದ್ದರು. ನಮ್ಮ ಜೀಪಿನಲ್ಲಿ ಗಾಯಾಳುಗಳನ್ನು, ನಮ್ಮ ಸಿಬ್ಬಂದಿಗಳನ್ನು ಅಸ್ಪತ್ರೆಗೆ ಕರೆದುಕೊಂಡು ಹೋಗಲು ಸ್ಥಳ ಇಕ್ಕಟ್ಟಾದ ಕಾರಣ ಚಾಸಾಃ 2 ರವರನ್ನು ಚಾಸಾಃ 17 ರವರ ಜೀಪಿನಲ್ಲಿ ಅಸ್ಪತ್ರೆಗೆ ಚಿಕಿತ್ಸೆಗೆ ಕರೆದುಕೊಂಡು ಹೋಗಲು ಕಳುಹಿಸಿದ್ದೆ.

5. ನಾನು ಗಾಯಾಳು ಶಂಕಿತ ಆರೋಪಿಯನ್ನು ತುಮಕೂರಿನ ಜಿಲ್ಲಾ ಅಸ್ಪತ್ರೆಗೆ ದಾಖಲು ಮಾಡಿದ್ದೆ. ಸದರಿ ಘಟನೆಯ ಮಾಹಿತಿಯನ್ನು ಮೇಲಾಧಿಕಾರಿಗಳಿಗೆ ಮತ್ತು ಕಂಟ್ರೋಲ್ ರೂಮಿಗೆ ತಿಳಿಸಿದ್ದೆ. ಅರೋಪಿ ಚಾಸಾಃ 2 ರವರಿಗೆ ಹಲ್ಲೆ ಮಾಡಿ ಇತರ ಸಿಬ್ಬಂದಿಗಳಗೆ ಹಲ್ಲೆ ಮಾಡಲು ಪ್ರಯತ್ನಿಸಿದ ಕಾರಣ ನಮ್ಮ ಕರ್ತವ್ಯ ನಿರ್ವಹಣೆಗೆ ಅಡ್ಡಿವುಂಟಾಯಿತು. ಆರೋಪಿತ ನಮ್ಮ ತಂಡದ ಸಿಬ್ಬಂದಿಗಳಿಂದ ತಪ್ಪಿಸಿಕೊಳ್ಳಲು ಚಾಸಾಃ 2 ರವರಿಗೆ ಹಲ್ಲೆ ಮಾಡಿ ಇತರೆ ಸಿಬ್ಬಂದಿಗಳ ಮೇಲೆ ಹಲ್ಲೆ ಮಾಡಲು ಪ್ರಯತ್ನಿಸಿದರು.

6. ಆರೋಪಿ ನನ್ನ ತಂಡದ ಒಬ್ಬ ಸಿಬ್ಬಂದಿ ಮೇಲೆ  ಮಾರಣಾಂತಿಕ ಹಲ್ಲೆ ಮಾಡಿದ್ದು ಇತರ ಸಿಬ್ಬಂದಿಗಳ ಮೇಲೆ ಹಲ್ಲೆ ಮಾಡಲು ಪ್ರಯತ್ನಿಸಿದ ಬಗ್ಗೆ ತುಮಕೂರು ಗ್ರಾಮಾಂತರ ಪೊಲೀಸ್ ಠಾಣೆಗೆ ಲಿಖಿತ ದೂರು ಸಲ್ಲಿಸಿದ್ದೆ . ಸಾಕ್ಷಿ ದೂರು ಮತ್ತು ಸಹಿಯನ್ನು ನೋಡಿ ಗುರುತಿಸಿದ್ದು ದೂರನ್ನು ನಿಪಿ.1 ಮತ್ತು ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು.

7. ನಾನು ದೂರು ನೀಡಿದ ನಂತರ ಪೊಲೀಸರು ಘಟನಾ ಸ್ಥಳದಲ್ಲಿ ಮಹಜರ್ ಮಾಡಿದರು.

ನ್ಯಾಯಾಲಯದ ಬೆಳಗಿನ ಕಾಲಾವಧಿ ಮುಗಿದ ಕಾರಣ ಮುಂದುವರಿದ ಮುಖ್ಯ ವಿಚಾರಣೆಯನ್ನು ಮದ್ಯಾಹ್ನ 3 ಗಂಟೆಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

3 ನೇಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು

ತುಮಕೂರು.

ಮದ್ಯಾಹ್ನ 3-30 ಗಂಟೆಗೆ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

8. ಆರೋಪಿತ ತಪ್ಪಿಸಿಕೊಳ್ಳುವ ಉದ್ದೇಶಕ್ಕಾಗಿ ಮತ್ತು ಚಾಸಾಃ 2 ರವರನ್ನು ಹಾಗೂ ಇತರ ತಂಡದ ಸದಸ್ಯರನ್ನು ಕೊಲೆ ಮಾಡುವ ಉದ್ದೇಶಕ್ಕಾಗಿ ಹಲ್ಲೆ ಮಾಡಿರುತ್ತಾರೆ.

9. ನಾನು ದೂರು ಕೊಟ್ಟ ನಂತರ ಪ್ರ.ವ.ವರದಿ ದಾಖಲಾಗಿದ್ದು ನಂತರ ತನಿಖೆಯನ್ನು ತಿಪಟೂರು ಉಪವಿಭಾಗದ ಡಿವೈ.ಎಸ್.ಪಿ ಚಾಸಾಃ 19 ರವರಿಗೆ ತನಿಖಾಧಿಕಾರಿಯಾಗಿ ನೇಮಕಗೊಂಡಿದ್ದರು. ಚಾಸಾಃ 19 ರವರು ದಿನಾಂಕಃ 6-12-2020 ರಂದು ನನ್ನನ್ನು ಠಾಣಾಧಿಕಾರಿಗಳ ಕಚೇರಿಗೆ ಬರಮಾಡಿಕೊಂಡಿದ್ದರು. ಚಾಸಾಃ 19 ರವರು ಕಚೇರಿಗೆ ಪಂಚರಾದ ಚಾಸಾಃ 7 ಮತ್ತು 8 ರವರನ್ನು ತಮ್ಮ ಕಚೇರಿಗೆ ನಾನು ಹೋಗುವ ಮೊದಲೇ ಬರಮಾಡಿಕೊಂಡಿದ್ದರು. ನಾನು ಕಚೇರಿಗೆ ಹೋದ ನಂತರ ಚಾಸಾಃ 19 ರವರು ಪಂಚರನ್ನು ಪರಿಚಯಮಾಡಿಕೊಟ್ಟರು. ಚಾಸಾಃ 19 ರವರು ನನ್ನ ಸಮಕ್ಷಮ ಈ ಪ್ರಕರಣದ ವಿವರಗಳನ್ನು ಸಂಕ್ಷಿಪ್ತವಾಗಿ ಚಾಸಾಃ 7 ಮತ್ತು 8 ರವರಿಗೆ ವಿವರಿಸಿ ಪಂಚರಾಗಿ ಸಹಕರಿಸುವಂತೆ ಕೋರಿದರು. ನಂತರ ಚಾಸಾಃ 7 ಮತ್ತು 8 ರವರು ಪಂಚರಾಗಿ ಸಹಕರಿಸಲು ಒಪ್ಪಿದರು.

10. ಚಾಸಾಃ 19 ರವರು FSL ತಜ್ಞ ಚಾಸಾಃ 14 ಶ್ರೀನಿವಾಸರವರನ್ನು ತುಮಕೂರು ಗ್ರಾಮಾಂತರ ಠಾಣೆಗೆ ಬರಮಾಡಿಕೊಂಡಿದ್ದರು. ಪ್ರಕರಣದ ಸಂಕ್ಷಿಪ್ತ ವಿವರವನ್ನು ಚಾಸಾಃ 19 ರವರು ಚಾಸಾಃ 14 ರವರಿಗೆ ವಿವರಿಸಿ ಹೇಳಿದ್ದರು. ಚಾಸಾಃ 19 ರವರು ಚಾಸಾಃ 14 ರವರಿಗೆ ಘಟನಾ ಸ್ಥಳದಲ್ಲಿ ಗುಂಡು ಹಾರಿಸಿದ ಬಗ್ಗೆ ಮತ್ತು ಸ್ಥಳದಲ್ಲಿ ಬೌತಿಕ ವಸ್ತುಗಳ ಸಂಗ್ರಹಣೆಗೆ

ಹಾಗೂ ಸಾಕ್ಷ್ಯ ಸಂಗ್ರಹಣೆಗೆ ಸಹಕರಿಸುವಂತೆ ಕೋರಿದರು. ಚಾಸಾಃ 14 ರವರು ಚಾಸಾಃ 19 ರವರ ಕೋರಿಕೆಗೆ ಒಪ್ಪಿದ್ದರು.

11. ಚಾಸಾಃ 11 ರವರು ನನ್ನನ್ನು, ಚಾಸಾಃ 7 ಮತ್ತು 8 ಹಾಗೂ FSL ತಜ್ಞರಾದ ಚಾಸಾಃ 14 ರವರನ್ನು ಮತ್ತು ಠಾಣೆಯ ಇತರ ಸಿಬ್ಬಂದಿಗಳನ್ನು ತಮ್ಮ ಇಲಾಖಾ ಜೀಪಿನಲ್ಲಿ ಕೃತ್ಯ ನಡೆದ ಸ್ಥಳಕ್ಕೆ ಕರೆದುಕೊಂಡು ಹೋದರು. ತುಮಕೂರು ಗ್ರಾಮಾಂತರ ಠಾಣೆಯ ಪೊಲೀಸರು ಘಟನೆ ನಡೆದಿದ್ದ ಸ್ಥಳವನ್ನು ಟೇಪ್ ಹಾಕಿ ಸಂರಕ್ಷಿಸಿದ್ದರು. ನಾನು ಚಾಸಾಃ 19 ರವರಿಗೆ ಕೃತ್ಯ ನಡೆದ ಸ್ಥಳ ತೋರಿಸಿದ್ದೆ. ನಾನು ತೋರಿಸಿದ ಸ್ಥಳದಲ್ಲಿ ತುಮಕೂರು ಗ್ರಾಮಾಂತರ ಠಾಣೆಯ ಸಿಬ್ಬಂದಿ ರಘು ರವರು ಗಾರ್ಡ್ ಆಗಿ ಕಾರ್ಯ ನಿರ್ವಹಿಸುತ್ತಿದ್ದರು. ಗಾರ್ಡ್ ರಘು ರವರಿಂದ ಕೃತ್ಯ ನಡೆದ ಸ್ಥಳವನ್ನು ಚಾಸಾಃ 19 ರವರು ಮುಂದಿನ ಕಾರ್ಯಕ್ಕೆ ತಮ್ಮ ವಶಕ್ಕೆ ಪಡೆದರು.

12. ಚಾಸಾಃ 19 ರವರು ನಮ್ಮ ಸಮಕ್ಷಮ ಚಾಸಾಃ 14 ರವರ ಸಹಾಯದಿಂದ ಸಂರಕ್ಷಿತ ಸ್ಥಳದಲ್ಲದ್ದ ರಕ್ತಮಿಶ್ರಿತ ಮಣ್ಣು ಮತ್ತು ಸಾದಾ ಮಣ್ಣನ್ನು ಅಮಾನತ್ತುಪಡಿಸಿಕೊಂಡರು. ರಕ್ತಮಿಶ್ರಿತ ಮಣ್ಣು ಮತ್ತು ಸಾದಾ ಮಣ್ಣನ್ನು ಪ್ಲಾಸ್ಟಿಕ್ ಕವರ್ ನಲ್ಲಿ ಸಂಗ್ರಹಿಸಿ ನಂತರ ಬಿಳಿ ಬಟ್ಟೆಯಿಂದ ಸುತ್ತಿ ಸೀಲ್ ಮಾಡಿದರು. ನಾನು ಅವುಗಳನ್ನು ನೋಡಿದರೆ ಗುರುತಿಸಬಲ್ಲೆ. ಮೊಹರು ಮಾಡಿರುವ ಎರಡು ಬಟ್ಟೆ ಚೀಲದ ಮೇಲೆ ಅಂಟಸಿರುವ ಮಹಜರ್ ಚೀಟಿಯಲ್ಲಿ ಸಾಕ್ಷಿ ತಮ್ಮ ಸಹಿಯನ್ನು ನೋಡಿ ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಅಬಿಯೋಜಕರು ಬಟ್ಟೆ ಚೀಲದ ಮೇಲಿರುವ ಮೊಹರನ್ನು ತೆರೆಯಲು ಅನುಮತಿ ಕೋರಿದ್ದು ಅನುಮತಿಸಲಾಯಿತು)

ಸಾಕ್ಷಿ ಅಮಾನತ್ತುಪಡಿಸಿದ ಮಾದರಿ ಮಣ್ಣನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ.1 ಎಂದು ಗುರುತಿಸಲಾಯಿತು. ರಕ್ತಮಿಶ್ರಿತ ಮಣ್ಣನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ.2 ಎಂದು ಗುರುತಿಸಲಾಯಿತು. ಮು.ಮಾ.1 ಮತ್ತು 2 ರ ಮೇಲೆ ಅಂಟಿಸಿರುವ ಮಹಜರ್ ಚೀಟಿಯಲ್ಲಿ ಸಾಕ್ಷಿ ತಮ್ಮ ಸಹಿ ನೋಡಿ ಗುರುತಿಸಿದ್ದು ಮು.ಮಾ,1(ಎ) ಮತ್ತು ಮು.ಮಾ.2(ಎ) ಎಂದು ಗುರುತಿಸಲಾಯಿತು.

13. ಸ್ಥಳದಲ್ಲಿ ಚಾಸಾಃ 19 ರವರು ನಮ್ಮ ಸಮಕ್ಷಮ ಫೈರ್ ಆಗಿದ್ದ ಎರಡು 9 ಎಂ ಎಂ ಪಿಸ್ತೂಲ್ ಕಾಡತೂಸು ಅಮಾನತ್ತುಪಡಿಸಿಕೊಂಡರು.

(ಈ ಹಂತದಲ್ಲಿ ಅಬಿಯೋಜಕರು ಬಟ್ಟೆ ಚೀಲದ ಮೇಲಿರುವ ಮೊಹರನ್ನು ತೆರೆಯಲು ಅನುಮತಿ ಕೋರಿದ್ದು ಅನುಮತಿಸಲಾಯಿತು)

ಸಾಕ್ಷಿ ಅಮಾನತ್ತುಪಡಿಸಿದ ಎರಡು ಫೈರ್ ಆಗಿದ್ದ ಎರಡು 9 ಎಂ ಎಂ ಪಿಸ್ತೂಲ್ ಕಾಡತೂಸು ನೋಡಿ ಗುರುತಿಸಿದ್ದು ಅದನ್ನು ಮು.ಮಾ.3 ಮತ್ತು 4 ಎಂದು ಗುರುತಿಸಲಾಯಿತು. ಮು.ಮಾ.3 ಮತ್ತು 4 ರ ಮೇಲೆ ಅಂಟಿಸಿರುವ ಮಹಜರ್ ಚೀಟಿಯಲ್ಲಿ ಸಾಕ್ಷಿ ತಮ್ಮ ಸಹಿ ನೋಡಿ ಗುರುತಿಸಿದ್ದು ಮು.ಮಾ,3(ಎ) ಮತ್ತು ಮು.ಮಾ.4(ಎ) ಎಂದು ಗುರುತಿಸಲಾಯಿತು.

14. ನಂತರ ಅರೋಪಿ ಹಲ್ಲೆ ಮಾಡಲು ಉಪಯೋಗಿಸಿದ ರಕ್ತಮೆತ್ತಿದ್ದ ಮರದ ಹಿಡಿಯುಳ್ಳ ಡ್ರಾಗರ್ ನ್ನು ನಮ್ಮ ಸಮಕ್ಷಮ ಅಮಾನತ್ತುಪಡಿಸಿಕೊಂಡರು.

(ಈ ಹಂತದಲ್ಲಿ ಅಬಿಯೋಜಕರು ಬಟ್ಟೆ ಚೀಲದ ಮೇಲಿರುವ ಮೊಹರನ್ನು ತೆರೆಯಲು ಅನುಮತಿ ಕೋರಿದ್ದು ಅನುಮತಿಸಲಾಯಿತು)

ಸಾಕ್ಷಿ ಅಮಾನತ್ತುಪಡಿಸಿದ ಡ್ರಾಗರ ನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ.5 ಎಂದು ಗುರುತಿಸಲಾಯಿತು. ಮು.ಮಾ.5 ರ ಮೇಲೆ ಅಂಟಸಿರುವ ಮಹಜರ್ ಚೀಟಿಯಲ್ಲಿ ಸಾಕ್ಷಿ ತಮ್ಮ ಸಹಿ ನೋಡಿ ಗುರುತಿಸಿದ್ದು ಮು.ಮಾ,5(ಎ) ಎಂದು ಗುರುತಿಸಲಾಯಿತು.

15. ಆರೋಪಿಗೆ ಸೇರಿದ ಒಂದು ಚಪ್ಪಲಿಯನ್ನು ನಮ್ಮ ಸಮಕ್ಷಮ ಅಮಾನತ್ತುಪಡಿಸಿಕೊಂಡರು.

(ಈ ಹಂತದಲ್ಲಿ ಅಬಿಯೋಜಕರು ಬಟ್ಟೆ ಚೀಲದ ಮೇಲಿರುವ ಮೊಹರನ್ನು ತೆರೆಯಲು ಅನುಮತಿ ಕೋರಿದ್ದು ಅನುಮತಿಸಲಾಯಿತು)

ಸಾಕ್ಷಿ ಅಮಾನತ್ತುಪಡಿಸಿದ ಆರೋಪಿಗೆ ಸೇರಿದ ಒಂದು ಜೊತೆ ಚಪ್ಪಲಿಯನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ.6 ಎಂದು ಗುರುತಿಸಲಾಯಿತು. ಮು.ಮಾ.6 ರ ಮೇಲೆ ಅಂಟಸಿರುವ ಮಹಜರ್ ಚೀಟಿಯಲ್ಲಿ ಸಾಕ್ಷಿ ತಮ್ಮ ಸಹಿ ನೋಡಿ ಗುರುತಿಸಿದ್ದು ಮು.ಮಾ,6(ಎ) ಎಂದು ಗುರುತಿಸಲಾಯಿತು.

16. ನಾನು ಘಟನೆಯ ವೇಳೆ ಆರೋಪಿಯ ಮೇಲೆ ಗುಂಡು ಹಾರಿಸಿದ್ದ ನನ್ನ ಸರ್ವೀಸ್ 9 ಎಂ ಎಂ ಪಿಸ್ತೂಲನ್ನು ಚಸಾಃ 19 ರವರಿಗೆ ಮಹಜರ್ ವೇಳೆ ಘಟನಾ ಸ್ಥಳದಲ್ಲಿಯೇ ಒಪ್ಪಿಸಿದ್ದೆ. ನಮ್ಮ ಸಮಕ್ಷಮ ಚಾಸಾಃ 19 ರವರು ಅದನ್ನು ಅಮಾನತ್ತುಪಡಿಸಿಕೊಂಡಿದ್ದರು.

(ಈ ಹಂತದಲ್ಲಿ ಅಬಿಯೋಜಕರು ಬಟ್ಟೆ ಚೀಲದ ಮೇಲಿರುವ ಮೊಹರನ್ನು ತೆರೆಯಲು ಅನುಮತಿ ಕೋರಿದ್ದು ಅನುಮತಿಸಲಾಯಿತು)

ಸಾಕ್ಷಿ ಅಮಾನತ್ತುಪಡಿಸಿದ ತನ್ನ ಸರ್ವೀಸ್ 9 ಎಂಎಂ ಪಿಸ್ತೂಲನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ.7 ಎಂದು ಗುರುತಿಸಲಾಯಿತು. ಮು.ಮಾ.7 ರ ಮೇಲೆ ಅಂಟಸಿರುವ ಮಹಜರ್ ಚೀಟಿಯಲ್ಲಿ ಸಾಕ್ಷಿ ತಮ್ಮ ಸಹಿ ನೋಡಿ ಗುರುತಿಸಿದ್ದು ಮು.ಮಾ,7(ಎ) ಎಂದು ಗುರುತಿಸಲಾಯಿತು.

17. ನನ್ನ ಸರ್ವೀಸ್ ಪಿಸ್ತೂಲ್ ನಲ್ಲಿದ್ದ ಮೂರು 9 ಎಂಎಂ ನ ಕಾಡತೂಸುಗಳನ್ನು ಚಾಸಾಃ 19 ರವರು ನಮ್ಮ ಸಮಕ್ಷಮ ಅಮಾತನ್ತುಪಡಿಸಿಕೊಂಡರು.

(ಈ ಹಂತದಲ್ಲಿ ಅಬಿಯೋಜಕರು ಬಟ್ಟೆ ಚೀಲದ ಮೇಲಿರುವ ಮೊಹರನ್ನು ತೆರೆಯಲು ಅನುಮತಿ ಕೋರಿದ್ದು ಅನುಮತಿಸಲಾಯಿತು)

ಸಾಕ್ಷಿ ಅಮಾನತ್ತುಪಡಿಸಿದ ತನ್ನ ಸರ್ವೀಸ್ 9 ಎಂಎಂ ಪಿಸ್ತೂಲನ್ನ ಮೂರು ಜೀವಂತ ಕಾಡತೂಸುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮು.ಮಾ.8 ಎಂದು ಗುರುತಿಸಲಾಯಿತು. ಮು.ಮಾ.8 ರ ಮೇಲೆ ಅಂಟಸಿರುವ ಮಹಜರ್ ಚೀಟಿಯಲ್ಲಿ ಸಾಕ್ಷಿ ತಮ್ಮ ಸಹಿ ನೋಡಿ ಗುರುತಿಸಿದ್ದು ಮು.ಮಾ,8(ಎ) ಎಂದು ಗುರುತಿಸಲಾಯಿತು.

18. ಆರೋಪಿ ಸಮುದಾಯ ಭವನದಲ್ಲಿದ್ದ ತಂಗಿದ್ದ ವೇಳೆ ಬಳಕೆ ಮಾಡಿದ್ದ ಕ್ರೀಂ ಮತ್ತು ಕಪ್ಪು ಬಣ್ಣದ ಹೂವಿನ ಡಿಸೈನ್ ನ ಒಂದು ಬೆಡ್ ಶೀಟನ್ನು ಚಾಸಾಃ 19 ನನ್ನ ಸಮಕ್ಷಮ ಅಮಾನತ್ತುಪಡಿಸಿಕೊಂಡರು.

(ಈ ಹಂತದಲ್ಲಿ ಅಬಿಯೋಜಕರು ಬಟ್ಟೆ ಚೀಲದ ಮೇಲಿರುವ ಮೊಹರನ್ನು ತೆರೆಯಲು ಅನುಮತಿ ಕೋರಿದ್ದು ಅನುಮತಿಸಲಾಯಿತು)

ಸಾಕ್ಷಿ ಅಮಾನತ್ತುಪಡಿಸಿದ ಬೆಡಶೀಟನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮು.ಮಾ.9 ಎಂದು ಗುರುತಿಸಲಾಯಿತು. ಮು.ಮಾ.9 ರ ಮೇಲೆ ಅಂಟಸಿರುವ ಮಹಜರ್ ಚೀಟಿಯಲ್ಲಿ ಸಾಕ್ಷಿ ತಮ್ಮ ಸಹಿ ನೋಡಿ ಗುರುತಿಸಿದ್ದು ಮು.ಮಾ,9(ಎ) ಎಂದು ಗುರುತಿಸಲಾಯಿತು.

19. ಆರೋಪಿ ಸಮುದಾಯ ಭವನದಲ್ಲಿದ್ದ ತಂಗಿದ್ದ ವೇಳೆ ಬಳಕೆ ಮಾಡಿದ್ದ ಕಪ್ಪು ಬಣ್ಣದ ಗೀರುಗಳುಳ್ಳ ಸಿಮೆಂಟ್ ಕಲರ್ ನ ಒಂದು ಬೆಡ್ ಶೀಟನ್ನು ಚಾಸಾಃ 19 ನನ್ನ ಸಮಕ್ಷಮ ಅಮಾನತ್ತುಪಡಿಸಿಕೊಂಡರು.

(ಈ ಹಂತದಲ್ಲಿ ಅಬಿಯೋಜಕರು ಬಟ್ಟೆ ಚೀಲದ ಮೇಲಿರುವ ಮೊಹರನ್ನು ತೆರೆಯಲು ಅನುಮತಿ ಕೋರಿದ್ದು ಅನುಮತಿಸಲಾಯಿತು)

ಸಾಕ್ಷಿ ಅಮಾನತ್ತುಪಡಿಸಿದ ಬೆಡಶೀಟನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮು.ಮಾ.10 ಎಂದು ಗುರುತಿಸಲಾಯಿತು. ಮು.ಮಾ.10 ರ ಮೇಲೆ ಅಂಟಸಿರುವ

ಮಹಜರ್ ಚೀಟಿಯಲ್ಲಿ ಸಾಕ್ಷಿ ತಮ್ಮ ಸಹಿ ನೋಡಿ ಗುರುತಿಸಿದ್ದು ಮು.ಮಾ,10(ಎ) ಎಂದು ಗುರುತಿಸಲಾಯಿತು.

20. ಮು.ಮಾ.1 ರಿಂದ 10 ನ್ನು ಅಮಾತನ್ನುಪಡಿಸಿ ಸ್ಥಳದಲ್ಲಿ ಚಸಾಃ 19 ರವರು ಮಧ್ಯಾಹ್ನ 1-15 ರಿಂದ ಸಂಜೆ 4-15 ರವರೆಗೆ ಮಹಜರ್ ಬರವಣಿಗೆ ಮಾಡಿದರು. ಜಿಲ್ಲಾ ಪೊಲೀಸ್ ವತಿಯಿಂದ ಪೊಲೀಸ್ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮುಖ್ಯ ಪೇದೆ ಮುರಳಿ ರವರನ್ನು ನುರಿತ ಪೋಟೋಗ್ರಾಫರ್ ಎಂದು ನೇಮಕ ಮಾಡಲಾಗಿರುತ್ತದೆ. ಸದರಿ ವ್ಯಕ್ತಿ ಮಹಜರ್ ವೇಳೆ ಕೃತ್ಯ ನಡೆದ ಸ್ಥಳದಲ್ಲಿ ನಡೆದ ಎಲ್ಲಾ ಕಾರ್ಯಗಳ ಬಗ್ಗೆ ಪೂರ್ಣವಾದ ವಿಡಿಯೋ ಮತ್ತು ಭಾವಚಿತ್ರಗಳನ್ನು ತೆಗೆದಿರುತ್ತಾರೆ ಸಾಕ್ಷಿ ಮಹಜರ್ ಮತ್ತು ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಮಹಜರನ್ನು ನಿಪಿ.2 ಮತ್ತು ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ಸ್ಥಳದಲ್ಲಿ ತೆಗೆದ ಛಾಯಾಚಿತ್ರಗಳ ಪ್ರಿಂಟ್ ಪತಿಯ 4 ಹಾಳೆಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ.3 ರಿಂದ 6 ಎಂದು ಗುರುತಿಸಲಾಯಿತು.

21. ಮಹಜರ್ ಬರವಣಿಗೆಯ ನಂತರ ಸ್ಥಳದಲ್ಲಿ ಚಾಸಾಃ 19 ರವರು ಕಚ್ಛಾ ನಕ್ಷೆಯನ್ನು ತಯಾರು ಮಾಡಿದರು. ಸಾಕ್ಷಿ ಕಚ್ಛಾ ನಕ್ಷೆ ಮತ್ತು ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.7 ಮತ್ತು ಸಾಕಿಯ ಸಹಿಯನ್ನು ನಿಪಿ.7(ಎ) ಎಂದು ಗುರುತಿಸಲಾಯಿತು. ದಿನಾಂಕಃ 6-12-2020 ರಂದು ನಾನು ಮತ್ತು ನನ್ನ ತಂಡದ ಸಿಬ್ಬಂದಿಗಳು ಇಲಾಖಾ ವಾಹನವನ್ನು ಬಳಕೆ ಮಾಡಿದ್ದ ಬಗ್ಗೆ ಲಾಗ್ ಬುಕ್ ನಲ್ಲಿ ನಾನು ಮತ್ತು ವಾಹನದ ಚಾಲಕರು ಸಹಿ ಮಾಡಿರುತ್ತೇವೆ. ಸಾಕ್ಷಿ ಸದರಿ ಲಾಗ್ ಬುಕನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.8 ಎಂದು ಗುರುತಿಸಲಾಯಿತು. (ನಿಪಿ.8 ಒಟ್ಟು 17 ಪುಟಗಳು

ಇರುತ್ತದೆ) ನಿಪಿ.8 ರ 9 ನೇಪುಟದಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಸದರಿ ಸಹಿಯನ್ನು ನಿಪಿ.8(ಎ) ಎಂದು ಗುರುತಿಸಲಾಯಿತು.

22. ನಮ್ಮ ಮೇಲೆ ಹಲ್ಲೆ ಮಾಡಿದ ಆರೋಪಿಯನ್ನು ನೋಡಿದರೆ ಗುರುತಿಸಬಲ್ಲೆ. ವಿಸಿ ಮೂಲಕ ಹಾಜರುಪಡಿಸಿರುವ ಅರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

ಈ ಹಂತದಲ್ಲಿ ಅಭಿಯೋಜಕರು ದಿನಾಂಕಃ 6-12-2020 ರಂದು ಸಾಕ್ಷಿಯನ್ನು ಅರೋಪಿ ಪತ್ತೆಗಾಗಿ ನೇಮಕಮಾಡಿದ್ದ ಜ್ಞಾಪನ ಪತ್ರದ ಮೂಲ ಪ್ರತಿ ಕಡತದಲ್ಲಿ ಲಭ್ಯವಿಲ್ಲದೇ ಇರುವ ಕಾರಣ ಮುಂದುವರಿದ ಮುಖ್ಯ ವಿಚಾರಣೆಗಾಗಿ ಕಾಲಾವಕಾಶ ಕೋರಿದ್ದು ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

3 ನೇಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು

ತುಮಕೂರು.